# ಹತ್ತನೆಯ ತರಗತಿ ಅರ್ಧವಾರ್ಷಿಕ ಪರೀಕ್ಷೆ –2022

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** **ಅವಧಿ: 3.ಗಂಟೆ15 ನಿಮಿಷ**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **1*6=6**

**1. ಅ, ಈ, ಊ, ಶ, ನ, ಋ, ಥ, ಒ, ಮ, ಯ, ಳ, ಏ – ಇವುಗಳಲ್ಲಿರುವ ದೀರ್ಘಸ್ವರಗಳು ;**

ಎ) ಅ, ಋ, ಒ ಬಿ) ಈ, ಊ, ಏ

ಸಿ) ಥ, ನ, ಮ ಡಿ) ಯ, ಶ, ಳ

**2. ಇಸವಾಸ – ಈ ಶಬ್ದದ ಗ್ರಾಂಥಿಕ ರೂಪ :**

(ಎ) ವಿಶ್ವಾಸ (ಬಿ) ಸಹವಾಸ

(ಸಿ) ಸನಿವಾಸ (ಡಿ) ಇಸವಿ

**3. ಸವರ್ಣದೀರ್ಘಸಂಧಿ ಪದ :**

(ಎ) ವಾಚನಾಲಯ (ಬಿ) ವಾಗ್ದೇವಿ

(ಸಿ) ಮಳೆಗಾಲ (ಡಿ) ತಿಂಗಳಿನೂರು

**4. ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ;**

(ಎ) ಅಲ್ಪವಿರಾಮ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ

(ಸಿ) ವಿವರಣಾತ್ಮಕ ಚಿಹ್ನೆ (ಡಿ) ಉದ್ಧರಣ ಚಿಹ್ನೆ

**5. ದ್ವಿರುಕ್ತಿಗೆ ಉದಾಹರಣೆ :**

(ಎ) ಕಾಲ್ಕೀಳು (ಬಿ) ಸರಸರ

(ಸಿ) ಓಡೋಡಿ (ಡಿ) ಕಾಡುಮೇಡು

**6. ಕ್ರಿಯಾರ್ಥಕಾವ್ಯಯಕ್ಕೆ ಉದಾಹರಣೆ;**

(ಎ) ಆದ್ದರಿಂದ (ಬಿ) ಸಾಕು

(ಸಿ) ಅವಳೇ (ಡಿ) ಚೆನ್ನಾಗಿ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀಪದವನ್ನು ಬರೆಯಿರಿ.** **4*1=4**

7. ಬಂದಾಳು : ಸಂಭವನಾರ್ಥಕ :: ಬರಲಿ :: ____________

8. ಕುರುಡ : ಅನ್ವರ್ಥಕನಾಮ : : ರಾಹಿಲ : ________________

9. ಪ್ರಥಮ : ಕರ್ತೃಕಾರಕ : : ಸಪ್ತಮಿ : ______________

10. ಹವಣು : ಸಿದ್ಧತೆ: : ಊಣೆಯ: ____________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **1*7=7**

11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

12. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?

13. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?

14. 'ವೆಸ್ಟ್ ಮಿನಿಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?

15. ನದಿಜಲಗಳು ಏನಾಗಿವೆ?

16. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?

17. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?

**IV. ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **10*2=20**

18. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?

19. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?

20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
21. ಶಿಕ್ಷಣದ ಬಗ್ಗೆ ವಿಶ್ವೇಶ್ವೇರಯ್ಯನವರು ಏನೆಂದು ಹೇಳಿದ್ದಾರೆ?
22. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?
23. ಲಾವಣಿಗಳನ್ನು 'ವೀರಗೀತೆಗಳು' ಎಂದು ಕರೆಯಲಾಗಿದೆ ಏಕೆ?
24. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?
25. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?
26. ಪೆರಿಯಾರ್ ಅವರ ಬದುಕಿನ ಧ್ಯೇಯವೇನಾಗಿತ್ತು?
27. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2*3=6**

28. ಬನ್ನಂಜೆ ಗೋವಿಂದಾಚಾರ್ಯ
29. ಕುಮಾರವ್ಯಾಸ

**VI. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30. ಭೇದವಿಲ್ಲೆಲೆ ಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ

**VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ.** **1*3=3**

31. ಪೂರ್ವದಿಕ್ಕಿನಲ್ಲಿ ಮೂಡಿದ ಸೂರ್ಯನು ಮುತ್ತೈದೆಯ ಹಣೆಯಲ್ಲಿರುವ ಕುಂಕುಮದಂತೆ ಕಂಡನು.

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*3=3**

32. ಕೂಡಿ ಬಾಳಿದರೆ ಸ್ವರ್ಗ ಸುಖ

**ಅಥವಾ**

ತಾಳಿದವನು ಬಾಳಿಯಾನು

**IX. ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6*3=18**

33. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."
34. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ ! ಮಣ್ಣು ! ಮಣ್ಣು !"
35. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."
36. "ಪ್ರೀತಿಯ ಹಣತೆಯ ಹಚ್ಚೋಣ"
37. "ಹೊಸಗಾಲದ ಹಸುಮಕ್ಕಳ ಹರಸಿ"
38. "ಹೊಡೆದರೂ ಗುಂಡ ಕರುಣ ಇಲ್ಲದ್ಹಂಗ"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** **1*4=4**

39. ನೀಲಮೇಘ ______________
______________
______________
______________
ಹಕ್ಕಿ ಹಾರುತಿದೆ ನೋಡಿದಿರಾ ?

**ಅಥವಾ**

ಯುಗಯುಗ ______________
______________
______________
______________
ಹಕ್ಕಿ ಹಾರುತಿದೆ ನೋಡಿದಿರಾ ?

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ**

40. ಕೊರಳ ಸೆರೆ ಹಿಗ್ಗಿದವು ದೃಗುಜಲ **1*4=4**
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ಗುರೂಪದೇಶವನ್ನು ಯಾರ್ಯಾರು ಹೇಗೆ ಸ್ವೀಕರಿಸುತ್ತಾರೆ ?

ಅಥವಾ

ಸಂಪತ್ತಿನ ಮದವೇರಿದ ಅರಸರ ಸ್ವಭಾವ ಹೇಗಿರುತ್ತದೆ ? ವಿವರಿಸಿ

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?

ಅಥವಾ

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**XIII.ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4=(2+2)**

ಮನುಷ್ಯನ ಮನಸ್ಸು ಈಡೇರದ, ತುಚ್ಛವಾದ ಆಸೆಗಳ ಸುಳಿಗೆ ಸಿಲುಕಿ ನೆಲೆಯೇ ಇಲ್ಲದೇ ಅಲೆದಾಡುತ್ತದೆ. ಇಂತಹ ಜೀವನವು ಅತ್ಯಂತ ಕನಿಷ್ಠವಾದುದು. ಮನುಷ್ಯನಿಗೆ ತನ್ನ ಜೀವನದಲ್ಲಿ ಒಂದು ಗುರಿ ಇರಬೇಕು. ಮೊಗ್ಗಿನಂತೆ ಇರುವ ಗುರಿಯು ಆತನ ಶ್ರಮ, ಶ್ರದ್ಧೆಗಳಿಂದ ಹೂವಾಗಿ ಅರಳಿ ಫಲವನ್ನು ಪಡೆದು ಬಾಳಿನ ಅಂತ್ಯ ಕಾಣಬೇಕು. ತಾವರೆ ಕೆಸರಿನಲ್ಲಿ ಹುಟ್ಟಿದರೂ ಆಕಾಶದಲ್ಲಿ ಇರುವ ಸೂರ್ಯನ ಕಿರಣಗಳನ್ನು ನೋಡಿ ತಾನು ಅರಳಿ ಸುಂದರವಾಗಿ ಕಾಣಿಸುತ್ತದೆ. ಈ ರೀತಿಯ ಧ್ಯೇಯವನ್ನು ಇಟ್ಟುಕೊಂಡು ದುಡಿಮೆಗೆ ಶರಣಾಗುತ್ತ ಬದ್ಧತೆಯಿಂದ ಕೆಲಸ ಮಾಡಬೇಕು ಆಗ ಜೀವನದಲ್ಲಿ ಸಾರ್ಥಕತೆ ಸಿಗುತ್ತದೆ.

ಒಂದು ಬಾಣಕ್ಕೆ ಒಂದೆ ಗುರಿ ಅನೇಕ ಗುರಿಗಳು ಇರಲು ಸಾಧ್ಯವಿಲ್ಲ. ಒಂದು ದೇಹದಲ್ಲಿ ಒಂದೇ ಆತ್ಮ ಇರುತ್ತದೆ. ಹಾಗಾಗಿ ಒಂದು ಜೀವನದಲ್ಲಿ ಹಲವು ಗುರಿಗಳು ಏಕೆ? ಒಂದೇ ದೊಡ್ಡ ಗುರಿಯನ್ನು ಇಟ್ಟುಕೊಂಡು ಹಗಲುರಾತ್ರಿ ಗುರಿ ಸಾಧನೆಗೆ ಹೋರಾಡು. 'ಜನತಾ ಜನಾರ್ಧನ' ಎಂಬಂತೆ ಮನುಷ್ಯನಲ್ಲಿ ನಾರಾಯಣನನ್ನು ಕಾಣಬೇಕು. ಈ ಭೂಲೋಕದಲ್ಲಿ ಸ್ವರ್ಗದ ಸೌಂದರ್ಯ, ಸಂಪತ್ತನ್ನು ಕಂಡುಕೊಳ್ಳುತ್ತಾ, ಸ್ವಾರ್ಥಕ್ಕಾಗಿ ಬದುಕದೆ, ಪರರ ಸುಖಕ್ಕಾಗಿ, ಪರರಿಗೆ ಉಪಕಾರ ಮಾಡುತ್ತ, ಬದುಕುವುದೆ, ಪರರ ಸುಖಕ್ಕಾಗಿ ಪರರಿಗೆ ಉಪಕಾರ ಮಾಡುತ್ತ, ಬದುಕುವುದೆ ನಿಜವಾದ ಜೀವನ. ಅದನ್ನು ಬಿಟ್ಟು ಸ್ವಾರ್ಥದಿಂದ ಸಂಕುಚಿತ ಮನೋಭಾವವನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ಉಂಟು ಮಾಡುತ್ತದೆ.

**ಪ್ರಶ್ನೆಗಳು :**

43. ಅ) ಮನುಷ್ಯನ ಜೀವನದಲ್ಲಿ ಸಾರ್ಥಕತೆ ಯಾವಾಗ ಸಿಗುತ್ತದೆ.

ಆ) ಈ ಲೇಖನದ ಪ್ರಕಾರ ನಿಜವಾದ ಜೀವನ ಎಂದರೆ ಯಾವುದು ?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ.** **1*5=5**

44. ನಿಮ್ಮನ್ನು ಕೋಲಾರದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸಮಂತ್ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆದ **ಪರಿಸರ ದಿನಾಚರಣೆ ಕಾರ್ಯಕ್ರಮ** ಕುರಿತು ತುಮಕೂರಿನ ಶ್ರೀಸಿದ್ಧಗಂಗಾ ಮಠದಲ್ಲಿ 10ನೇ ತರಗತಿ ಓದುತ್ತಿರುವ ನಿಮ್ಮ ಸ್ನೇಹಿತ/ತೆಗೊಂದು ಪತ್ರಬರೆಯಿರಿ.

**ಅಥವಾ**

ನಿಮ್ಮನ್ನು ಕೊಪ್ಪಳದ ಗವಿಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಓದುತ್ತಿರುವ ಅಭಿನವ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ **ಸ್ವಾಂತಂತ್ರ್ಯದ ಅಮೃತ ಮಹೋತ್ಸವ** ಕಾರ್ಯಕ್ರಮಕ್ಕೆ ಆಹ್ವಾನಿಸಿ ನಿಮ್ಮ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

**XV. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1*5=5**

45. ರಾಷ್ಟ್ರೀಯ ಹಬ್ಬಗಳ ಮಹತ್ತ್ವ

**ಅಥವಾ**

ಸಾಮಾಜಿಕ ಪಿಡುಗುಗಳು